ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸಾ.ಮ್ಯ.ಕೆ. ಒಳಪಟ್ಟಿದೆ)
ಉಪವಿಭಾಗ-1
ಚಾವಿಸನಿನಿ, ನಂಜನಗೂಡು-571301
Telephone No: 08221-224311
08221-225551

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Sub Division-1
CESC, Nanjangud-571301
Web Site: www.cescmysore.org
E-mail ID: aeengd@cescmysore.org

Company Identity Number[CIN]:-U40109KA2004SGC035177

ಸಂಖ್ಯೆ:- ಸಕಾನಿಇಂ(ವಿ)/ಸ್ಇಂ(ತಾ)/2020-21-2607　　　　ದಿನಾಂಕ: 19/01/2021

## ಜನ ಸಂಪರ್ಕ ಸಭಾ ನಡಾವಳಿ

ದಿನಾಂಕ: 16.01.2021 ರಂದು ನಂಜನಗೂಡು ಉಪವಿಭಾಗ-1 ರ ಕಛೇರಿ ಆವರಣದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಉಪವಿಭಾಗ ಮಟ್ಟದ ಜನಸಂಪರ್ಕ ಸಭೆಯ ಸಭಾ ನಡಾವಳಿ

<u>ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:</u>

| | | |
|---|---|---|
| 1. | ಶ್ರೀ ಪ್ರದೀಪ್.ಟಿ | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಂಜನಗೂಡು ವಿಭಾಗ |
| 2. | ಶ್ರೀ ದೇವರಾಜಯ್ಯ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) |
| 3. | ಶ್ರೀಮತಿ ಹೇಮ.ಬಿ | ಸಹಾಯಕ ಇಂಜಿನಿಯರ್(ತಾ). |
| 4. | ಶ್ರೀ ಹರೀಶ್ ಕುಮಾರ್ | ಸಹಾಯಕ ಇಂಜಿನಿಯರ್ ಪಟ್ಟಣ ಶಾಖೆ |
| 5. | ಶ್ರೀ ವೀರೇಶ್. ಕೆ.ವಿ | ಸಹಾಯಕ ಇಂಜಿನಿಯರ್ ತಾಂಡವಪುರ ಶಾಖೆ |
| 6. | ಶ್ರೀ ಶಶಿಕಿರಣ | ಸಹಾಯಕ ಇಂಜಿನಿಯರ್ ಸಿಂಧುವಳ್ಳಿಪುರ ಶಾಖೆ |
| 7. | ಶ್ರೀ ರಂಗಸ್ವಾಮಿ | ಕಿರಿಯ ಇಂಜಿನಿಯರ್ ಕಳಲೆ ಶಾಖೆ |
| 8. | ಶ್ರೀ ಸಂತೋಷ್ ಕುಮಾರ್. ವೈ.ಡಿ | ಕಿರಿಯ ಇಂಜಿನಿಯರ್ ಸುತ್ತೂರು ಶಾಖೆ |

ಮೊದಲಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ನಂಜನಗೂಡು ಉಪವಿಭಾಗ-1 ರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಗ್ರಾಹಕರು, ರೈತ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಇತರೆ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಪತ್ರಿಕ ಪ್ರತಿನಿಧಿಗಳು ಸ್ವಾಗತಿಸಿದರು. ನಂತರ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಹಿಂದಿನ ಸಭೆಯಲ್ಲಿ ಸಲ್ಲಿಸಿದ್ದ ದೂರುಗಳಿಗೆ ಕೈಗೊಂಡ ಕ್ರಮಗಳ ಕುರಿತು ಅನುಪಾಲನ ವರದಿಯನ್ನು ಓದಿ ಹಿಂದಿನ ಸಭೆಯಲ್ಲಿ ಸಲ್ಲಿಸಿದ್ದ ದೂರುಗಳಿಗೆ ಕ್ರಮ ಕೈಗೊಂಡಿರುವ ಕುರಿತು ಶಾಖಾಧಿಕಾರಿಗಳು ಮತ್ತು ಗ್ರಾಹಕರೊಂದಿಗೆ ಚರ್ಚಿಸಲಾಯಿತು. ತದನಂತರ ಗ್ರಾಹಕರು ಹೊಸದಾಗಿ ತಮ್ಮ ಅಹವಾಲುಗಳನ್ನು ಸಲ್ಲಿಸಿದರು.

ದಿನಾಂಕ:16.01.2021 ರಂದು ನಡೆದ ಜನಸಂಪರ್ಕ ಸಭೆಯಲ್ಲಿ ಸ್ವೀಕರಿಸಿದ ಅಹವಾಲು ಅರ್ಜಿಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿರುವ ಅರ್ಜಿಗಳ ವಿವರ

| ಕ್ರಮ ಸಂಖ್ಯೆ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ | ಅಹವಾಲುಗಳ ವಿವರ | ಕ್ರಮ |
|---|---|---|---|
| 1 | ಶ್ರೀ ಚಿಕ್ಕಸ್ವಾಮಿ<br>ಕಬ್ಬು ಬೆಳೆಗಾರ ಸಂಘ<br>8722859420 | • ಕೆರೆಹುಂಡಿ ಗ್ರಾಮದ 63 ಕೆ.ವಿ.ಎ ಪರಿವರ್ತಕವನ್ನು ಬದಲಾಯಿಸಿ ಕೊಡುವಂತೆ ಕೋರಿದರು.<br>• ಹದಿನಾರು ಗ್ರಾಮದಲ್ಲಿ 100 ಕೆ.ವಿ.ಎ ಪರಿವರ್ತಕಕ್ಕೆ ಸಂಪರ್ಕಿತಗೊಂಡ ವಿದ್ಯುತ್ ಭಾರ ಅಧಿಕವಾಗಿದ್ದು ಹೆಚ್ಚುವರಿ ಪರಿವರ್ತಕ ಅಳವಡಿಸುವಂತೆ ಕೋರಿದರು.<br>• ಸಿದ್ದಯ್ಯನಹುಂಡಿ ಗ್ರಾಮದಲ್ಲಿ ಸುಖೇತ್ ರಾಜ್ DOLO ಅಳವಡಿಸುವಂತೆ ಕೋರಿದರು.<br>• ಕೂಡ್ಲೂರು ಕೆರೆ ಹತ್ತಿರ ಕಬ್ಬಿಣದ ಕಂಬವಿದ್ದು ಬದಲಾಯಿಸುವಂತೆ ಕೋರಿದರು.<br>• I.P ಫೀಡರ್ ಗಳಿಗೆ 7 ಗಂಟೆ ನಿರಂತರ ವಿದ್ಯುತ್ ಸರಬರಾಜು ಮಾಡುವಂತೆ ಕೋರಿದರು. | ಸಿಂಧುವಳ್ಳಿ ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು. |
| 2 | ಶ್ರೀ ಚಂದ್ರು<br>ಏಚಗುಂಡ್ಲ<br>7090176282 | ಏಚಗುಂಡ್ಲ ಗ್ರಾಮದಲ್ಲಿ ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡುವಂತೆ ಕೋರಿದರು. | ಸಿಂಧುವಳ್ಳಿ ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.. |
| 3 | ಶ್ರೀ ಬಸವಣ್ಣ.ಎನ್<br>ಅಧ್ಯಕ್ಷಕರು<br>ಕಬ್ಬು ಬೆಳೆಗಾರರ ಸಂಘ | • ಸಿಂಧುವಳ್ಳಿ ಊಟಿ ರಸ್ತೆಯಲ್ಲಿ ಹಾದುಹೋಗಿರುವ 11ಕೆವಿ ಮಾರ್ಗದ ವಿದ್ಯುತ್ ತಂತಿ ಸಡಿಲವಾಗಿದ್ದು ಸರಿಪಡಿಸಿಕೊಡುವಂತೆ ಕೋರಿದರು.<br>• ಸಿಂಧುವಳ್ಳಿ ಗ್ರಾಮದಲ್ಲಿ ಶಿವಣ್ಣನ ಮನೆ ಕುರುಬರ ಬೀದಿಯಲ್ಲಿ ಮಧ್ಯಂತರ ಕಂಬ ಅಳವಡಿಸಲು ಕೋರಿದರು.<br>• ಸಿಂಧುವಳ್ಳಿ ಗ್ರಾಮದಲ್ಲಿ ನಿರಂತರ ಜ್ಯೋತಿ ವಿದ್ಯುತ್ ಸರಬರಾಜಿನಲ್ಲಿ ಅಡಚಣೆಗಳಾಗುತಿದ್ದು ಅಡಚಣೆ ಕಡಿಮೆ ಮಾಡುವಂತೆ ಕೋರಿದರು.<br>• ಭಾಗ್ಯ ಜ್ಯೋತಿ ಗ್ರಾಹಕರ ವಿದ್ಯುತ್ ಸಂಪರ್ಕ ಕಡಿತಗೊಳಿಸಬಾರದೆಂದು ಕೋರಿದರು. | ಸಿಂಧುವಳ್ಳಿ ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು. |
| 4 | ಶ್ರೀ ಪುಟ್ಟಸ್ವಾಮಿ<br>ಆಲತ್ತೂರು ಗ್ರಾಮ<br>9845237831 | ಹದಿನಾರು ಗ್ರಾಮದ ಸರ್ವೆ ನಂ. 364 ಜಮೀನಿನಲ್ಲಿ ಹಾದು ಹೋಗಿರುವ 11 ಕೆವಿ ವಿದ್ಯುತ್ ತಂತಿ ಕೆಳಮಟ್ಟದಲ್ಲಿದ್ದು ಸರಿಪಡಿಸುವಂತೆ ಕೋರಿದರು. | ಹದಿನಾರು ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |
| 5 | ಶ್ರೀ ಸ್ವಾಮಿ<br>ನಗರ್ಲೆ<br>9743599185 | ನಗರ್ಲೆ ಗ್ರಾಮದ ಹೊಸ ಬಡಾವಣೆಯಲ್ಲಿ ಹಾದುಹೋಗಿರುವ 11ಕೆವಿ ಮಾರ್ಗವು ಕೆಳಮಟ್ಟದಲ್ಲಿದ್ದು ಸರಿಪಡಿಸುವಂತೆ ಕೋರಿದರು. | ಸುತ್ತೂರು ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |

| | | | |
|---|---|---|---|
| 6 | ಶ್ರೀ ಶಿವಕುಮಾರ್<br>ಕತ್ವಾಡಿಪುರ<br>8722859728 | ಸರ್ವೆ ನಂ. 49 ಜಮೀನಿನಲ್ಲಿ ಹಾದು ಹೋಗಿರುವ 11 ಕೆ.ವಿ ವಿದ್ಯುತ್ ಮಾರ್ಗ ಕೆಳಮಟ್ಟದಲ್ಲಿದ್ದು ಸರಿಪಡಿಸಿಕೊಡುವಂತೆ ಕೋರಿದರು. | ತಾಂಡವಪುರ ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |
| 7 | ಶ್ರೀ ಸಿದ್ದು<br>ಕೆಂಪಿಸಿದ್ದನಹುಂಡಿ ಗ್ರಾಮ<br>8792578175 | ಮಲ್ಲರಾಜಯ್ಯನ ಹುಂಡಿ ಮಹೇಶ್ ರವರ ಜಮೀನಿನಲ್ಲಿ ಹಾದು ಹೋಗಿರುವ 11 ಕೆ.ವಿ ವಿದ್ಯುತ್ ಮಾರ್ಗ ಕೆಳಮಟ್ಟದಲ್ಲಿದ್ದು ಸರಿಪಡಿಸಿಕೊಡುವಂತೆ ಕೋರಿದರು. | ಹದಿನಾರು ಶಾಖಾಧಿಕಾರಿಯವರಿಗೆ ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ-1
ಚಾವಿಸನಿನಿ, ನಂಜನಗೂಡು